# ದಾವಣಗೆರೆ ವಿಶ್ವವಿದ್ಯಾನಿಲಯ
# DAVANGERE UNIVERSITY

ಕುಲಸಚಿವರ ಕಚೇರಿ (ಪರೀಕ್ಷಾಂಗ),
ದಾವಣಗೆರೆ ವಿಶ್ವವಿದ್ಯಾನಿಲಯ,
ಶಿವಗಂಗೋತ್ರಿ, ದಾವಣಗೆರೆ-577007.
ದೂರವಾಣಿ ಸಂಖ್ಯೆ: 08192-208420/208104.

Office of the Registrar (Evaluation)
Davangere University,
Shivagangothri, Davangere -577007.
Phone No. 08192-208420/208104.

**Email ID: examination@davangereuniversity.ac.in**

ಸಂಖ್ಯೆ:ದಾವಿವಿ:ಪವಿ:ಬಿ.ಪಿ.ಇಡಿ:2023-24: 5611 ದಿನಾಂಕ:15-03-2024.

## -: ಪರೀಕ್ಷಾ ಪ್ರಕಟಣೆ :-

**ವಿಷಯ:** ಏಪ್ರಿಲ್-2024 ರಲ್ಲಿ ನಡೆಯುವ ಸ್ನಾತಕ ಬಿ.ಪಿ.ಇಡಿ ಪದವಿಯ UUCMS ತಂತ್ರಾಂಶದ **ಪ್ರಥಮ** ಮತ್ತು **ತೃತೀಯ** ಸೆಮಿಸ್ಟರ್ ಪರೀಕ್ಷೆಗಳಿಗೆ ಅರ್ಜಿ ಶುಲ್ಕ ಪಾವತಿಸುವ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:15-03-2024.

*****

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಬಿ.ಪಿ.ಇಡಿ., ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, **ಏಪ್ರಿಲ್-2024** ರಲ್ಲಿ ನಡೆಸುವ ಸ್ನಾತಕ **ಬಿ.ಪಿ.ಇಡಿ** ಪದವಿಯ ರೆಗ್ಯೂಲರ್ & ರಿಪೀಟರ್ಸ್ ವಿದ್ಯಾರ್ಥಿಗಳಿಗೆ **ಪ್ರಥಮ** ಮತ್ತು **ತೃತೀಯ** ಸೆಮಿಸ್ಟರ್ ಪರೀಕ್ಷೆಗಳಿಗೆ ಅರ್ಜಿ ಶುಲ್ಕ ಪಾವತಿಸಲು ತಿಳಿಸಲಾಗಿದೆ. ಪ್ರಾಯೋಗಿಕ/ಲಿಖಿತ ಪರೀಕ್ಷೆಗಳ ವಿವರವಾದ ವೇಳಾಪಟ್ಟಿಯನ್ನು ನಂತರ ಪ್ರಕಟಿಸಲಾಗುವುದು. ಇದಕ್ಕೆ ಪೂರಕವಾದ ಇತರೆ ಮಾಹಿತಿಗಳನ್ನು ಕೆಳಗೆ ನೀಡಲಾಗಿದೆ ಹಾಗೂ ಪರೀಕ್ಷಾ ಶುಲ್ಕವನ್ನು ಡಿಜಿಟಲ್ ಮಾಧ್ಯಮದ ಮೂಲಕ ಸಂದಾಯ ಮಾಡುವುದು ಕಡ್ಡಾಯವಾಗಿದೆ.

ಬಿ.ಪಿ.ಇಡಿ ಪದವಿಯ ಅಭ್ಯರ್ಥಿಗಳಿಗೆ ಆಯಾ ಕಾಲೇಜುಗಳನ್ನು ಪರೀಕ್ಷಾ ಕೇಂದ್ರಗಳನ್ನಾಗಿ ನಿಗಧಿಪಡಿಸಲಾಗಿದೆ.

### ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ದಿನಾಂಕಗಳು

**ದಂಡ ಶುಲ್ಕವಿಲ್ಲದೆ ----------- 15-04-2024 ರಿಂದ 20-04-2024ರ ವರೆಗೆ**
**ದಂಡಶುಲ್ಕ ರೂ.120 ರಂತೆ ಪ್ರತಿ ಸೆಮಿಸ್ಟರ್‌ಗೆ ----------- 21-04-2024 ರಿಂದ 22-04-2024ರ ವರೆಗೆ**
**ದಂಡಶುಲ್ಕ ರೂ.600 ರಂತೆ ಪ್ರತಿ ಸೆಮಿಸ್ಟರ್‌ಗೆ ----------- 23-04-2024 ರವರೆಗೆ**

### ಶುಲ್ಕದ ವಿವರಗಳು

**ಬಿ.ಪಿಇಡಿ ವಿದ್ಯಾರ್ಥಿಗಳಿಗೆ**

| ಕ್ರ. ಸಂ. | ವಿವರ | ಪ್ರಸ್ತುತ ಶುಲ್ಕದ ವಿವರ |
|---|---|---|
| 1 | ಪರೀಕ್ಷಾ ಅರ್ಜಿ ಪ್ರಕ್ರಿಯೆ ಶುಲ್ಕ | ರೂ. 100.00 |
| 2 | ಪ್ರತಿ ಸೆಮಿಸ್ಟರ್ ಪೂರ್ಣ ಪರೀಕ್ಷೆಗೆ (ಸೆಮಿಸ್ಟರ್ ಎಲ್ಲಾ ಪತ್ರಿಕೆಗಳಿಗೆ ರೂ.1155/- ಕ್ಕೆ ಒಳಪಟ್ಟು) | ಪರೀಕ್ಷಾ ಶುಲ್ಕ ರೂ. 1155.00<br>ಅಂಕಪಟ್ಟಿ ಶುಲ್ಕ ರೂ. 205.00<br>------<br>ಒಟ್ಟು ಶುಲ್ಕ ರೂ. 1360.00 |
| 3 | ಸೆಮಿಸ್ಟರ್‌ನ ಒಂದು ಪತ್ರಿಕೆಗೆ | ರೂ.240.00 |
| 4 | ಪ್ರಾಯೋಗಿಕ ಪರೀಕ್ಷೆಗೆ ಪ್ರತಿ ಪತ್ರಿಕೆಗೆ (ಫೇಲ್ ವಿದ್ಯಾರ್ಥಿಗಳಿಗೆ) | ರೂ. 155.00 |
| 5 | ರಿಪೀಟರ್ಸ್ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಶುಲ್ಕ | ರೂ. 205.00 |

## ವಿದ್ಯಾರ್ಥಿಗಳಿಗೆ ಸೂಚನೆ

1. ವಿದ್ಯಾರ್ಥಿಗಳು Online ಮುಖಾಂತರ ಅರ್ಜಿ ಸಲ್ಲಿಸಲು https://uucms.karnataka.gov.in/Login/Index ನಲ್ಲಿ Student login ಆಗಿ ಪರೀಕ್ಷೆ ತೆಗೆದುಕೊಳ್ಳುವ ಸೆಮಿಸ್ಟರ್‌ವಾರು/ವಿಷಯವಾರು ಗುರುತು ಮಾಡಿ ಪರೀಕ್ಷಾ ಅರ್ಜಿಯನ್ನು ಸಲ್ಲಿಸಬೇಕು.
2. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಪಾವತಿ ಮಾಡುವುದಕ್ಕೆ ಮುಂಚಿತವಾಗಿ ಎಲ್ಲಾ ಮಾಹಿತಿಗಳ ನಿಖರತೆಯನ್ನು ಖಾತರಿಪಡಿಸಿಕೊಳ್ಳಬೇಕು.
3. ವಿದ್ಯಾರ್ಥಿಗಳು ಯಾವುದೇ ಪರೀಕ್ಷೆಯನ್ನು ಪ್ರಥಮ ಅವಕಾಶದಲ್ಲಿ ಬರೆಯುತ್ತಿದ್ದರೆ, ಅಂತಹ ಸಂದರ್ಭದಲ್ಲಿ ಎಲ್ಲಾ ವಿಷಯಗಳನ್ನು ಕಡ್ಡಾಯವಾಗಿ ತೆಗೆದುಕೊಳ್ಳುವುದು.
4. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸುವುದಕ್ಕೆ ಮುಂಚಿತವಾಗಿ ಪರೀಕ್ಷೆ ಬರೆಯಬೇಕಾದ ವಿಷಯಗಳನ್ನು ಖಚಿತ ಪಡಿಸಿಕೊಳ್ಳುವುದು ಹಾಗೂ ನಂತರದಲ್ಲಿ ತಿದ್ದುಪಡಿಗೆ ಅವಕಾಶವಿರುವುದಿಲ್ಲ.
5. ವಿದ್ಯಾರ್ಥಿಗಳಿಗೆ ಪರೀಕ್ಷೆ ಶುಲ್ಕವನ್ನು ಪಾವತಿ ಮಾಡುವ ವಿಧಾನ.
   - ವಿದ್ಯಾರ್ಥಿಯು UUCMS login ಮುಖಾಂತರ Payment Gateway ಸೌಲಭ್ಯವನ್ನು ಬಳಸಿಕೊಂಡು (Debit Card/ Credit Card / Net Banking / Wallet, ಇತ್ಯಾದಿ) ಹಣ ಪಾವತಿಸಬಹುದು.
6. ವಿದ್ಯಾರ್ಥಿಗಳು ತಮ್ಮ **UUCMS login** ನಿಂದ ಪರೀಕ್ಷಾ ಪ್ರವೇಶ ಪತ್ರಿಕೆಯನ್ನು ಸ್ವತಃ ಪಡೆಯಬಹುದು.
7. ಪರೀಕ್ಷಾ ಶುಲ್ಕವನ್ನು ಪಾವತಿಸಿದ ನಂತರ ಶೈಕ್ಷಣಿಕ ಅವಧಿ ಮುಗಿಯುವರೆಗೂ ತರಗತಿಗಳಿಗೆ ಹಾಜರಾಗಿ ನಿಯಮಾನುಸಾರ ಹಾಜರಾತಿ ಗಳಿಸುವುದು ಕಡ್ಡಾಯವಾಗಿರುತ್ತದೆ. ಇಲ್ಲವಾದಲ್ಲಿ ಪರೀಕ್ಷೆ ಬರೆಯಲು ಅನರ್ಹರು.

**ವಿಶೇಷ ಸೂಚನೆ:** ವಿದ್ಯಾರ್ಥಿಗಳು Internet Browsing centerನ ಮಾಲೀಕರ ಬ್ಯಾಂಕ್ ಖಾತೆಯ ಮೂಲಕ ವಿಶ್ವವಿದ್ಯಾನಿಲಯಕ್ಕೆ ಹಣ ಪಾವತಿಸಿದಲ್ಲಿ ಉಂಟಾಗುವ ತಾಂತ್ರಿಕ ತೊಂದರೆಗಳಿಗೆ ವಿದ್ಯಾರ್ಥಿಗಳೇ ಜವಾಬ್ದಾರರು ಹಾಗೂ 2 ಬಾರಿ ಶುಲ್ಕ ಪಾವತಿಸಿದ್ದಲ್ಲಿ ಮರುಪಾವತಿಗೆ (No Refund) ಅವಕಾಶವಿರುವುದಿಲ್ಲ.

## ಪ್ರಾಚಾರ್ಯರಿಗೆ ಸೂಚನೆ

1. ಕಾಲೇಜಿನ ಪ್ರಾಂಶುಪಾಲರು ಪರೀಕ್ಷೆಗೆ ಸಂಬಂಧಪಟ್ಟ ಎಲ್ಲಾ ಕಾರ್ಯಗಳನ್ನು **UUCMS** ನ College login ಮುಖಾಂತರ ಮಾಡಬೇಕು.
2. ಕಾಲೇಜಿನ ಪ್ರಾಂಶುಪಾಲರು ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಕಟ್ಟುವುದಕ್ಕಿಂತ ಮುಂಚಿತವಾಗಿ ಎಲ್ಲಾ ರೀತಿಯ ಅರ್ಹತೆಗಳು ಹೊಂದಿದ್ದಾರೆ ಎಂದು ಖಚಿತ ಪಡಿಸಿಕೊಳ್ಳಬೇಕು.
3. ಕಾಲೇಜಿನ ಪ್ರಾಂಶುಪಾಲರು **UUCMS** ನ login ಮುಖಾಂತರ ವಿದ್ಯಾರ್ಥಿಗಳ ಪರೀಕ್ಷೆ ಅರ್ಹತೆಯನ್ನು ದೃಢೀಕರಿಸಬೇಕು.
4. ಕಾಲೇಜು ದೃಢೀಕರಿಸಿದ ಮಾಹಿತಿಗಳನ್ನು ವಿದ್ಯಾರ್ಥಿಗಳಿಗೆ **UUCMS** ನ login ಮುಖಾಂತರ ತಿಳಿಸಲಾಗುವುದು.
5. S.S.P ಪೋರ್ಟಲ್ ಮುಖಾಂತರ ಸಮಾಜ ಕಲ್ಯಾಣ ಇಲಾಖೆಯಿಂದ ನೇರವಾಗಿ ಆಯಾ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ವಿದ್ಯಾರ್ಥಿ ವೇತನ ಜಮಾ ಮಾಡಲಾಗುತ್ತಿರುವುದರಿಂದ, ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಪೂರ್ಣ ಶುಲ್ಕವನ್ನು ಪಾವತಿಸಬೇಕು.
6. ರೂ. 2.5 ಲಕ್ಷಗಳ ಆದಾಯಕ್ಕಿಂತ ಮೇಲ್ಪಟ್ಟ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕ ಪಾವತಿಸಬೇಕು. ಮರುಯತ್ನದ (Repeaters) ಮತ್ತು ದಂಡ ಶುಲ್ಕದೊಂದಿಗೆ ಪರೀಕ್ಷಾ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ಯಾವುದೇ ಶುಲ್ಕ ವಿನಾಯಿತಿ ಇರುವುದಿಲ್ಲ.
7. ಪ್ರವರ್ಗ-1ಕ್ಕೆ 2.5 ಲಕ್ಷ ಹಾಗೂ ರೂ. 1 ಲಕ್ಷ ಅಥವಾ ಇದಕ್ಕಿಂತ ಕಡಿಮೆ ಕುಟುಂಬದ ವಾರ್ಷಿಕ ಆದಾಯವನ್ನು ಹೊಂದಿರುವ 2ಎ, 2ಬಿ, 3ಎ, 3ಬಿ, ಹಾಗೂ ಇತರ Freshers ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು. ಆದರೆ, ವಿದ್ಯಾರ್ಥಿಗಳ ಅರ್ಹತೆ ಮತ್ತು ಮೆರಿಟ್ ಆಧರಿಸಿ ಸರ್ಕಾರದ ಅನುದಾನದ ಲಭ್ಯತೆಗೆ ಒಳಪಟ್ಟು ಶುಲ್ಕ ಮರುಬರಿಕೆ ಮೊತ್ತವನ್ನು ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಇಲಾಖೆಯಿಂದ ನೇರವಾಗಿ ಆಯಾ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಎನ್.ಇ.ಎಫ್.ಟಿ ವ್ಯವಸ್ಥೆ ಮೂಲಕ ಜಮಾ ಮಾಡಲಾಗುವುದೆಂದು ಸರ್ಕಾರದ ಆದೇಶ ಸಂಖ್ಯೆ:ಸ.ಕ.ಇ./201/ಬಿ.ಎಂ.ಎಸ್.2011 ಬೆಂಗಳೂರು ದಿನಾಂಕ:23-06-2012ರಲ್ಲಿ ತಿಳಿಸಿರುತ್ತಾರೆ.
8. ವಿದ್ಯಾರ್ಥಿಗಳ ಪರೀಕ್ಷಾ ಪ್ರವೇಶ ಪತ್ರವನ್ನು ವಿಶ್ವವಿದ್ಯಾನಿಲಯದ ನಿರ್ದೇಶನುಸಾರ ಕಾಲೇಜುಗಳಲ್ಲಿ ಮುದ್ರಿಸಿ ಒದಗಿಸತಕ್ಕದ್ದು.

9. ವಿಶ್ವವಿದ್ಯಾನಿಲಯವು ಕಾಲೇಜುಗಳಿಗೆ ಒದಗಿಸುವ ಪ್ರಶ್ನೆ ಪತ್ರಿಕೆಗಳ ಸಂಖ್ಯೆಯನ್ನು **UUCMS** ನ login ಮುಖಾಂತರ ತಿಳಿಸುವುದು. ಕಾಲೇಜುಗಳು ಇದನ್ನು ಪರಿಶೀಲಿಸಿ ಯಾವುದಾದರು ವ್ಯತ್ಯಯವಿದ್ದರೆ ಅದನ್ನು ವಿಶ್ವವಿದ್ಯಾನಿಲಯದ ಅಧಿಕಾರಿಗಳ ಗಮನಕ್ಕೆ ತರುವುದು.

10. Invigilator Dairy ಯನ್ನು (02 ಪ್ರತಿಗಳು) ಆನ್‌ಲೈನ್ ಮೂಲಕವೇ ಸಿದ್ದಪಡಿಸಿಕೊಳ್ಳಬೇಕು ಹಾಗೂ ಆಯಾ ದಿನದ ಉತ್ತರ ಪತ್ರಿಕೆ ಬಂಡಲ್ ಗಳ ಜೊತೆಯಲ್ಲಿಯೇ 01 ಪ್ರತಿಯನ್ನು ಕಳುಹಿಸಿಕೊಡುವುದು.

11. ಪರೀಕ್ಷೆಗೆ ಗೈರುಹಾಜರಾದ ವಿದ್ಯಾರ್ಥಿಗಳ ನೊಂದಣಿ ಸಂಖ್ಯೆ ಮತ್ತು ವಿಷಯವನ್ನು (QP Code) ಆನ್ ಲೈನ್ ಮೂಲಕವೇ ನಮೂದಿಸುವುದು.

12. ನಿಯಮಾನುಸಾರ ವಿಶ್ವವಿದ್ಯಾನಿಲಯವು ಅನುಮೋದನೆ ನೀಡಿರುವ ವಿದ್ಯಾರ್ಥಿಗಳಿಂದ ಮಾತ್ರ ಪರೀಕ್ಷಾ ಅರ್ಜಿ ಹಾಗೂ ಶುಲ್ಕ ಸಂಗ್ರಹಿಸಬೇಕು.

13. ಯಾವುದೇ ವಿದ್ಯಾರ್ಥಿಯ ಆಂತರಿಕ ಅಂಕಗಳನ್ನು ಆನ್‌ಲೈನ್‌ನಲ್ಲಿ ನಮೂದಿಸದೇ ಬಿಟ್ಟುಹೋದಲ್ಲಿ ಯಾವುದೇ ಕಾರಣಕ್ಕೂ ಹಾರ್ಡ್ ಕಾಪಿಯನ್ನು ನಂತರ ಕಾಲೇಜಿನಿಂದ ಕಳುಹಿಸಿಕೊಟ್ಟಲ್ಲಿ ಅದನ್ನು ಪರಿಗಣಿಸಲಾಗುವುದಿಲ್ಲ ಅಂತಹ ಮನವಿಗಳನ್ನು ತಿರಸ್ಕರಿಸಲಾಗುವುದು.

14. **UUCMS ತಂತ್ರಾಂಶದನುಸಾರ ಪರೀಕ್ಷಾ ಪ್ರವೇಶ ಪತ್ರ ಪಡೆಯಲು ಪರೀಕ್ಷಾ ಪೂರ್ವದಲ್ಲೇ ಥಿಯರಿ/ಪ್ರಾಯೋಗಿಕ ವಿಷಯಗಳ ಆಂತರಿಕ ಅಂಕಗಳು ಮತ್ತು ಹಾಜರಾತಿಯನ್ನು ತಂತ್ರಾಂಶದಲ್ಲಿ ನಮೂದಿಸುವುದು ಖಡ್ಡಾಯವಾಗಿರುತ್ತದೆ.**

15. ಮುದ್ರಿತ ನಮೂನೆಗಳು (ಸೈದ್ಧಾಂತಿಕ/ಪ್ರಾಯೋಗಿಕ) ಹಾಗೂ ಉತ್ತರ ಪತ್ರಿಕೆಗಳ ಬೇಡಿಕೆ ಪಟ್ಟಿಯನ್ನು ಕಳುಹಿಸುವ ದಿನಾಂಕವನ್ನು ಮುಂದೆ ತಿಳಿಸಲಾಗುವುದು.

16. ಪರೀಕ್ಷಾ ಫೀ ಪಾವತಿಸದೇ ಇರುವ ವಿದ್ಯಾರ್ಥಿಗಳನ್ನು ಪರೀಕ್ಷೆ ಬರೆಯಲು ಅನುಮತಿಸಿ ನಂತರದಲ್ಲಿ ಫಲಿತಾಂಶ ಬಾರದ ಬಗ್ಗೆ ದೂರು ನೀಡುವುದನ್ನು ಗಮನಿಸಲಾಗಿದೆ. ಈ ಬಾರಿ ಇಂತಹ ಪ್ರಕರಣಗಳು ಬಾರದಂತೆ ಎಚ್ಚರವಹಿಸಬೇಕು. ಕಾರಣ, ಒಮ್ಮೆ ಪರೀಕ್ಷೆ ಬರೆಸಿದಲ್ಲಿ ಅಭ್ಯರ್ಥಿ ಪಟ್ಟಿಯಲ್ಲಿ ಇಲ್ಲದವರ ಫಲಿತಾಂಶ ನೀಡಲು ಅವಕಾಶವಿರದಂತೆ ಸಾಫ್ಟ್‌ವೇರ್‌ನಲ್ಲಿ ಮಾರ್ಪಾಡು ಮಾಡಿಕೊಳ್ಳಲಾಗಿದೆ. ವಿದ್ಯಾರ್ಥಿಗಳಿಗೆ ಇದನ್ನು ತಿಳಿಸುವುದು.

17. ಪ್ರಸ್ತುತ ಸಾಲಿನಲ್ಲಿ ಪ್ರವೇಶ ಪಡೆದು ಶೈಕ್ಷಣಿಕ ವಿಭಾಗದಿಂದ ಅನುಮೋದನೆಗೊಂಡ ವಿದ್ಯಾರ್ಥಿಗಳನ್ನು ಮಾತ್ರ ಪರೀಕ್ಷೆಗೆ ಹಾಜರು ಪಡಿಸುವ ಹೊಣೆಯು ಕಾಲೇಜಿನ ಪ್ರಾಂಶುಪಾಲರದ್ದಾಗಿರುತ್ತದೆ. ತಪ್ಪಿದಲ್ಲಿ ತಮ್ಮನ್ನೆ ನೇರ ಹೊಣೆಗಾರರನ್ನಾಗಿ ಮಾಡಲಾಗುತ್ತದೆ.

18. ಪರೀಕ್ಷೆಗೆ ಗೈರು ಹಾಜರಾದ ವಿದ್ಯಾರ್ಥಿಗಳ ಪಟ್ಟಿಯನ್ನು (Absentee Statement) ಪ್ರತ್ಯೇಕವಾಗಿ ಆಯಾ ದಿನದಂದೇ ವಿಶ್ವವಿದ್ಯಾನಿಲಯಕ್ಕೆ ಕಳುಹಿಸಬೇಕು.

ಕುಲಸಚಿವರು (ಪರೀಕ್ಷಾಂಗ)
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ - 577 007.

ಗೆ,

**ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಬಿ.ಪಿ.ಇಡಿ ಕಾಲೇಜುಗಳ ಪ್ರಾಚಾರ್ಯರುಗಳಿಗೆ.**

**ಪ್ರತಿ:**

1. ಸಮಾಜ ಕಲ್ಯಾಣ ಅಧಿಕಾರಿಗಳು, ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿ, ದಾವಣಗೆರೆ/ಚಿತ್ರದುರ್ಗ ಜಿಲ್ಲೆ.
2. ಜಿಲ್ಲಾಧಿಕಾರಿಗಳು, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ದಾವಣಗೆರೆ/ಚಿತ್ರದುರ್ಗ ಜಿಲ್ಲೆ.
3. ಆಪ್ತಶಾಖೆ, ಮಾನ್ಯ ಕುಲಪತಿಗಳು, ಕುಲಸಚಿವ(ಆಡಳಿತ), ಕುಲಸಚಿವ(ಪರೀಕ್ಷಾಂಗ), ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
4. ಉಪಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
5. ಅಧೀಕ್ಷಕರು, ವಿಷಯ ನಿರ್ವಾಹಕರುಗಳು, ಪರೀಕ್ಷಾಂಗ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಪ್ರಾದೇಶಿಕ ಮುಖ್ಯಸ್ಥರು, **UUCMS,** ಪರೀಕ್ಷಾಂಗ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
7. ಕಛೇರಿ ಪ್ರತಿ.

************